ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ,

ದಕ್ಷಿಣ ಕನ್ನಡ, ಮಂಗಳೂರು

ಸೆಷನ್ಸ್‌ಕೇಸ್ ನಂಬ್ರ 158/2024

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಬಿ. ನಂಜುಡಪ್ಪ | ಚಾಸಾ–10 |
| ತಂದೆಯ ಹೆಸರು | : | ಬಸವಯ್ಯ | ಫ್ರಾಸಾ–07 |
| ಪ್ರಾಯ | : | 76 ವರ್ಷ | ದಿನಾಂಕಃ 29.07.2026 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು. |
| ಉದ್ಯೋಗ | : | ನಿವೃತ್ತ ಡೆಪ್ಯುಟಿ ಡೈರೆಕ್ಟರ್, ಆರ್.ಎಫ್.ಎಸ್.ಎಲ್., ಮೈಸೂರು | |
| ವಾಸಸ್ಥಳ | : | ಬೆಂಗಳೂರು | |

(ಸಾಕ್ಷಿಯು ವಿಡಿಯೋ ಕಾನ್ಫರೆನ್ಸ್ ಮೂಲಕ ಸಾಕ್ಷ್ಯವನ್ನು ನುಡಿದಿರುತ್ತಾರೆ).

ಸಾಕ್ಷಿಯು ತಮ್ಮ FSL ಬೆಂಗಳೂರು ಕಚೇರಿಯಲ್ಲಿರುವ ವಿಡಿಯೋ ಕಾನ್ಫರೆನ್ಸ್ ಕೊಠಡಿಯಲ್ಲಿ ಹಾಜರಿದ್ದು ಎ. ವಿನಯ್ – ವೈಜ್ಞಾನಿಕ ಅಧಿಕಾರಿ ಇವರನ್ನು ರಿಮೋಟ್ ಪಾಯಿಂಟ್ ಕೋ–ಆರ್ಡಿನೋಟರ್ ಎಂದು ನೇಮಿಸಿಲಾಯಿತು. ವಿಡಿಯೋ ಕಾನ್ಫರೆನ್ಸ್ ಮೂಲಕ ಸಾಕ್ಷಿಯನ್ನು ದಾಖಲು ಮಾಡಿಕೊಳ್ಳಲಾಗುತ್ತಿದೆ. ವಿಡಿಯೋ ಸಂಪರ್ಕವನ್ನು ಜಿಟ್ಸಿಮೀಟ್ https://meet.jit.si/dpmng ಮೂಲಕ ಕಲ್ಪಿಸಿಕೊಳ್ಳಲಾಗಿದೆ. ನೆಟ್ ವರ್ಕ್ ನಲ್ಲಿ ಯಾವುದೇ ತೊಂದರೆ ಇಲ್ಲ. ಆರೋಪಿಗಳು ಮತ್ತು ಆರೋಪಿ ಪರ ವಕೀಲರು ನ್ಯಾಯಾಲಯದಲ್ಲಿ ಹಾಜರಿದ್ದಾರೆ. ಆಡಿಯೋ ಮತ್ತು ವಿಡಿಯೋ ಸ್ಪಷ್ಟವಾಗಿದೆ.

**ಮುಖ್ಯ ವಿಚಾರಣೆಃ ಮಾನ್ಯ ಸರಕಾರಿ ಅಭಿಯೋಜಕರಿಂದಃ**

ನಾನು 1995 ರಿಂದ 2001 ರವರೆಗೆ ವೈಜ್ಞಾನಿಕ ಅಧಿಕಾರಿಯಾಗಿ ಮಂಗಳೂರಿನ RFSL ನಲ್ಲಿ ಕರ್ತವ್ಯವನ್ನು ನಿರ್ವಹಿಸಿರುತ್ತೇನೆ.

2. ನಾನು B.Sc., post graduation in forensic biology including Serology ನ್ನು ನವ ದೆಹಲಿಯ NICFS ನಲ್ಲಿ ಮಾಡಿರುತ್ತೇನೆ. ಇದುವರೆಗೆ ಸುಮಾರು 30,000 ರಕ್ತ ಕಲೆಗಳ ಪ್ರಕರಣಗಳನ್ನು ಪರಿಶೀಲಿಸಿ ಸಿರೋಲಜಿ ವರದಿಗಳನ್ನು ನೀಡಿರುತ್ತೇನೆ.

3. ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ದಿಃ 28.07.1995 ರಲ್ಲಿ 3 ಸೀಲಾದ ವಸ್ತುಗಳನ್ನು ನಾನು ಪಡೆದುಕೊಂಡಿದ್ದು ಅವುಗಳನ್ನು ಪರಿಶೀಲಿಸಿದಾಗ ತನಿಖಾಧಿಕಾರಿಯು ಕಳುಹಿಸಿದ ಸೀಲು ಮತ್ತು ಇನ್ ವೈಸ್ ಗೂ ತಾಳೆ ಆಗುತ್ತಿತ್ತು. ಸದರಿ ವಸ್ತುಗಳನ್ನು ಜೀವಶಾಸ್ತ್ರ ವಿಭಾಗದ 4/95 ಎಂದು ಸಂಖ್ಯೆಯನ್ನು ನೀಡಲಾಗಿರುತ್ತದೆ.

4. ನಂತರ ತನಿಖಾಧಿಕಾರಿಯ ಕೋರಿಕೆಯಂತೆ ಸದರಿ ವಸ್ತುಗಳನ್ನು ಬಿಚ್ಚಿ ನೋಡಲಾಗಿ ಐಟಂ ಎ ನಲ್ಲಿ ಒಂದು half ಶರ್ಟ್ ಮತ್ತು ಅದರ ಜೊತೆ ವಿಸಿಲ್ ಗಾರ್ಡ್ ಇತ್ತು. ಐಟಂ ಡಿ ಮತ್ತು ಇ ಎಂದು ಗುರುತಿಸಿದ ಪ್ಲಾಸ್ಟಿಕ್ ಡಬ್ಬದಲ್ಲಿ ಮಣ್ಣು ಇತ್ತು. ನಂತರ ಅವುಗಳನ್ನು ರಾಸಾಯನಿಕ ಪರೀಕ್ಷೆಗೆ ಒಳಪಡಿಸಿ ನೋಡಿದಾಗ ಅವುಗಳಲ್ಲಿ ಐಟಂ ಎ ಶರ್ಟ್ ಮತ್ತು ಡಿ ಮಣ್ಣಿನಲ್ಲಿ ವಸ್ತುವಿನಲ್ಲಿ ರಕ್ತದ ಕಲೆಗಳು ಕಂಡು ಬಂದಿರುತ್ತದೆ. ಐಟಂ ಇ ಸಾದ ಮಣ್ಣಿನಲ್ಲಿ ರಕ್ತದ ಕಲೆಗಳು ಕಂಡು ಬಂದಿರುವುದಿಲ್ಲ.

5. ನಂತರ ಐಟಂ ಡಿ ಮತ್ತು ಇ ನ್ನು ಹೆಚ್ಚಿನ ಪರೀಕ್ಷೆಗಾಗಿ ಬೆಂಗಳೂರಿನ ಭೌತ ಶಾಸ್ತ್ರ ವಿಭಾಗಕ್ಕೆ ಕಳುಹಿಸುವ ಸಲುವಾಗಿ ತನಿಖಾಧಿಕಾರಿಗೆ ವಾಪಾಸ್ ಕೊಟ್ಟಿರುತ್ತೇನೆ. ಐಟಂ ಎ ನಲ್ಲಿ ರಕ್ತದ ಕಲೆಗಳು ಇದ್ದ ಜಾಗವನ್ನು ಕತ್ತರಿಸಿ ಮತ್ತು ಡಿ ನಲ್ಲಿ ರಕ್ತದ ಕಲೆ ಕಂಡು ಬಂದಿದ್ದರಿಂದ ಸ್ವಲ್ಪ ಮಣ್ಣನ್ನು ಸಹ ಪ್ರತ್ಯೇಕಿಸಿ ಮುಂದಿನ ಸೆರಾಲಜಿ ವಿಶ್ಲೇಷಣೆಗೆ ಒಳಪಡಿಸಿರುತ್ತೇನೆ ಮತ್ತು ಉಳಿದ ಸ್ವತ್ತುಗಳ ಭಾಗವನ್ನು ತನಿಖಾಧಿಕಾರಿಗೆ ಹಿಂತಿರುಗಿಸಿರುತ್ತೇನೆ.

6. ನಾನು ಕಲೆಗಳು ಇರುವುದನ್ನು ಪರೀಕ್ಷಿಸಿ ಕೊಟ್ಟ ವರದಿಯನ್ನು ನೋಡುತ್ತಿದ್ದು ಅದನ್ನು ನಿಪಿ–6 ಎಂದು, ಸಾಕ್ಷಿಯ ಸಹಿಯನ್ನು ನಿಪಿ–6(ಎ) ಎಂದು ಗುರುತಿಸಲಾಯಿತು. Seal impression ನ್ನು ನೋಡುತ್ತಿದ್ದು ಅದನ್ನು ನಿಪಿ–7 ಎಂದು, ಮಾದರಿ ಸೀಲನ್ನು ನಿಪಿ–7(ಎ) ಎಂದು, ಸಾಕ್ಷಿಯ ಸಹಿಯನ್ನು ನಿಪಿ–7(ಬಿ) ಎಂದು ಗುರುತಿಸಲಾಯಿತು.

7. ರಕ್ತ ಹತ್ತಿದ ಶರ್ಟ್ ನಲ್ಲಿರುವ ಕಲೆ ಮತ್ತು ಮಣ್ಣಿನಲ್ಲಿರುವ ರಕ್ತದ ಕಲೆಯನ್ನು ಪರೀಕ್ಷಿಸಿ ನೋಡಲಾಗಿ ಅದರಲ್ಲಿ ಐಟಂ ಎ ಶರ್ಟ್ ನಲ್ಲಿ ಮನುಷ್ಯ ಮೂಲದ ರಕ್ತವಾಗಿದ್ದು

ಅದು ಎ ಗುಂಪಿಗೆ ಸೇರಿದ ರಕ್ತವಾಗಿತ್ತು. ಮಣ್ಣಿನಲ್ಲಿದ್ದ ಐಟಂ ಡಿ ನಲ್ಲಿ ರಕ್ತದ ಕಲೆಗಳನ್ನು ಪರಿಶೀಲಿಸಿದಾಗ ಸಾಕಷ್ಟು ಪ್ರಮಾಣದಲ್ಲಿ ಇಲ್ಲದ್ದ ಕಾರಣ ಪರೀಕ್ಷೆಗೆ ಒಳಪಡಿಸಲು ಸಾಧ್ಯವಾಗಲಿಲ್ಲ.

8. ನಾನು ಈ ಬಗ್ಗೆ ಕೊಟ್ಟ ಸೆರಾಲಜಿ ವರದಿಯನ್ನು ನೋಡುತ್ತಿದ್ದು ಅದನ್ನು ನಿಪಿ-8 ಎಂದು, ಸಾಕ್ಷಿಯ ಸಹಿಯನ್ನು ನಿಪಿ-8(ಎ) ಎಂದು ಗುರುತಿಸಲಾಯಿತು.

9. ಈ ಪ್ರಕರಣದಲ್ಲಿ ಮಣ್ಣನ್ನು ಪರೀಕ್ಷಿಸಲು ಬೆಂಗಳೂರಿನ ಎಫ್.ಎಸ್.ಎಲ್. ಗೆ ಕಳುಹಿಸಿದ್ದು ಅಲ್ಲಿ ಧನರಾಜ್ ಆಚಾರ್ ಎಂಬ ಹೆಸರಿನ ವೈಜ್ಞಾನಿಕ ಅಧಿಕಾರಿ ಅವುಗಳನ್ನು ಪರೀಕ್ಷಿಸಿದ್ದು ಸದರಿ ಧನರಾಜ್ ಆಚಾರ್ ಇವರು ಮೃತಪಟ್ಟಿರುತ್ತಾರೆ. ಸದರಿ ಧನರಾಜ್ ಆಚಾರ್ ಇವರ ಹಸ್ತಾಕ್ಷರ ಮತ್ತು ಸಹಿಯ ಪರಿಚಯ ನನಗೆ ಇರುತ್ತದೆ.

10. ಭೌತ ಶಾಸ್ತ್ರ ವಿಭಾಗದಲ್ಲಿ 194/95 ರಂತೆ ನೊಂದಣಿ ಸಂಖ್ಯೆಯನ್ನು ನೀಡಿ ಸದರಿ ಐಟಂ ಡಿ ಮತ್ತು ಇ ಎಂದು ಗುರುತಿಸಿದ ಮಣ್ಣನ್ನು ಧನರಾಜ್ ಆಚಾರ್ ಇವರು ಪರೀಕ್ಷೆಗೆ ಒಳಪಡಿಸಿ ವರದಿ ಕೊಟ್ಟಿರುತ್ತಾರೆ. ಸದರಿ ವರದಿಯನ್ನು ನೋಡುತ್ತಿದ್ದು ಅದನ್ನು ನಿಪಿ-9 ಎಂದು ಗುರುತಿಸಲಾಯಿತು. Seal impression ನ್ನು ನೋಡುತ್ತಿದ್ದು ಅದನ್ನು ನಿಪಿ-10 ಎಂದು, ಮಾದರಿ ಸೀಲನ್ನು ನಿಪಿ-10(ಎ) ಎಂದು, ಧನರಾಜ್ ಆಚಾರ್ ಇವರ ಸಹಿಯನ್ನು ನಿಪಿ-10(ಬಿ) ಎಂದು ಗುರುತಿಸಲಾಯಿತು.

11. ನಾನು ಪರೀಕ್ಷೆಗೆ ಒಳಪಡಿಸಿದ ಶರ್ಟ್ ನ್ನು ನೋಡುತ್ತಿದ್ದು ಅದನ್ನು ಈಗಾಗಲೇ ಮುದ್ದೆ ಮಾಲು 1 ಎಂದು ಗುರುತಿಸಲಾಗಿರುತ್ತದೆ. ಸದರಿ ರಕ್ತದ ಕಲೆಗಳು ಇದ್ದ ಮಣ್ಣಿನ ಡಬ್ಬಿಯನ್ನು ನೋಡುತ್ತಿದ್ದು ಅದನ್ನು ಈಗಾಗಲೇ ಮುದ್ದೆ ಮಾಲು 7 ಎಂದು ಗುರುತಿಸಲಾಗಿರುತ್ತದೆ. ಸಾಧ ಮಣ್ಣು ಇದ್ದ ಕವರ್ ನ್ನು ನೋಡುತ್ತಿದ್ದು ಅದನ್ನು ಈಗಾಗಲೇ ಮುದ್ದೆ ಮಾಲು 8 ಎಂದು ಗುರುತಿಸಲಾಗಿರುತ್ತದೆ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಕೆ.ಡಿ.ಎಸ್./ ಎಲ್.ಎ.ಡಿ.ಸಿ. ವಕೀಲರಿಂದಃ**

12. ವಸ್ತುಗಳನ್ನು ಪಡೆದುಕೊಳ್ಳುವುದಕ್ಕಿಂತ ಮೊದಲು ನಾನು chain of custody report ನ್ನು ಪಡೆದುಕೊಂಡಿಲ್ಲ. ಸದರಿ ವಸ್ತುಗಳನ್ನು ನಮ್ಮ ವಿಭಾಗದ ಸ್ವಾಗತಕಾರರು ಮೊದಲು ಸ್ವೀಕರಿಸಿರುತ್ತಾರೆ. ಸದರಿ ಸ್ವಾಗತಕಾರರು ಅದೇ ದಿನವೇ ನನಗೆ ಸದರಿ ವಸ್ತುಗಳನ್ನು ಕೊಟ್ಟಿರುತ್ತಾರೆ. ಸದರಿ ವಸ್ತುಗಳ ಜೊತೆ ಮಹಜರನ್ನು ಕೂಡ ಕಳುಹಿಸಲಾಗಿತ್ತು. ತನಿಖಾಧಿಕಾರಿಯು ಮಹಜರನ್ನು ನನಗೆ ಕೊಟ್ಟ ಬಗ್ಗೆ ನನ್ನ ವರದಿಯಲ್ಲಿ ನಮೂದು ಮಾಡಿರುವುದಿಲ್ಲ. ನಾನು ಸದರಿ ವಸ್ತುಗಳನ್ನು ಪಡೆದಾಗ ಅವುಗಳ ಪೋಟೋವನ್ನು ತೆಗೆದಿರುವುದಿಲ್ಲ.

13. 1995 ನೇ ಇಸವಿಯಲ್ಲಿ ಆರ್.ಎಫ್.ಎಸ್.ಎಲ್. ಮಂಗಳೂರಿನಲ್ಲಿ ಪ್ಯಾತಾಲಜಿ ಲ್ಯಾಬ್ ಇರಲಿಲ್ಲ. ಯಾವ ಪರೀಕ್ಷೆಯ ಆಧಾರದ ಮೇಲೆ ರಕ್ತದ ಗುಂಪನ್ನು ಹೇಳಲಾಗಿರುತ್ತದೆ ಎಂಬುವುದರ ಬಗ್ಗೆ ವರದಿಯಲ್ಲಿ ಕಾಣಿಸಿರುವುದಿಲ್ಲ.

14. ನಿಪಿ: 8 – ಸೆರಾಲಜಿ ಪರೀಕ್ಷೆಯನ್ನು ನಾನೇ ಮಾಡಿರುತ್ತೇನೆ. ನಿಪಿ–8 ರಲ್ಲಿ ರಕ್ತದ ಗುಂಪನ್ನು ಯಾವ ಪರೀಕ್ಷೆ ಮಾಡಿ ಗುರುತಿಸಲಾಗಿರುತ್ತದೆ ಎನ್ನುವುದರ ಬಗ್ಗೆ ನಿಪಿ–8 ರಲ್ಲಿ ಕಾಣಿಸಿರುವುದಿಲ್ಲ.

15. ಐಟಂ ಡಿ ಮತ್ತು ಇ ನ್ನು ಹೆಚ್ಚಿನ ಪರೀಕ್ಷೆಗಾಗಿ ಬೆಂಗಳೂರಿನ ಭೌತ ಶಾಸ್ತ್ರ ವಿಭಾಗಕ್ಕೆ ಕಳುಹಿಸುವಾಗ chain of custody ಯ ವರದಿಯನ್ನು ಕೂಡ ಕಳುಹಿಸಿರುವುದಿಲ್ಲ. ನಾನು ಯಾವ ಲ್ಯಾಬ್ ನ ಪ್ರಕಾರ ಪರೀಕ್ಷೆಗಳನ್ನು ಮಾಡಲಾಗಿರುತ್ತದೆ ಎಂದು ನನ್ನ ವರದಿಯಲ್ಲಿ ಕಾಣಿಸಿರುವುದಿಲ್ಲ.

16. ನನಗೆ ಕಳುಹಿಸಿಕೊಟ್ಟ ವಸ್ತುಗಳನ್ನು ಸರಿಯಾಗಿ ಶೇಖರಣೆ ಮಾಡದೇ ಇದ್ದುದರಿಂದ ಅವುಗಳ ಪರೀಕ್ಷೆಗೆ ಯೋಗ್ಯವಾಗಿರಲಿಲ್ಲ ಎಂದರೆ ಸರಿಯಲ್ಲ. ನಾನು ಯಾವುದೇ ವಸ್ತುಗಳನ್ನು ಪರೀಕ್ಷೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಪೊಲೀಸರ ಮಾತು ಕೇಳಿ ನಾನು ವರದಿಗಳನ್ನು ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ಮುದ್ದೆ ಮಾಲು 1, 7

ಮತ್ತು 8 ನ್ನು ನನಗೆ ಗುರುತಿಸಲು ಆಗುವುದಿಲ್ಲ ಮತ್ತು ನ್ಯಾಯಾಲಯದಲ್ಲಿ ತೋರಿಸಿದ್ದನ್ನು ಅದೇ ಎಂದು ಗುರುತಿಸಿರುತ್ತೇನೆ ಎಂದರೆ ಸರಿಯಲ್ಲ.

17. ವೈಜ್ಞಾನಿಕವಾಗಿ ಸರಿಯಾಗಿ ಪರೀಕ್ಷೆ ಮಾಡದೇ ಇದ್ದರೂ ಕೂಡ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ–9 ನ್ನು ನನಗೆ ಸದರಿ ಧನರಾಜ್ ಆಚಾರ್ ಇವರು ಕಳುಹಿಸಿಕೊಟ್ಟಿರುತ್ತಾರೆ. ಪೊಲೀಸರು ಹೇಳಿಕೊಟ್ಟಂತೆ ನಾನು ನಿಪಿ–9 ನ್ನು ಗುರುತಿಸಿರುತ್ತೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ** ಇಲ್ಲ

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).

ಓದಿ ಹೇಳಿ ಕೇಳಿ ಸರಿ ಇದೆ.

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದ.ಕ. ಮಂಗಳೂರು.